KAMS200002742022

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ,**
**ಹೆಚ್.ಡಿ.ಕೋಟೆ**

:ಉಪಸ್ಥಿತರು :
ಶ್ರೀ ಮಹೇಶ್ ಬಿ.ಟಿ. ಬಿ.ಕಾಂ., ಎಲ್.ಎಲ್.ಎಂ.,
ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

ದಿನಾಂಕ: 18 ನೇ ನವೆಂಬರ್ 2025

**ಅಸಲು ದಾವಾ ಸಂಖ್ಯೆ 97/2022**

ವಾದಿ/ಯರು : ಸಣ್ಣದೇವಮ್ಮ

-ವಿರುದ್ಧ-

ಪ್ರತಿವಾದಿ/ಯರು : ಜವರನಾಯಕ ಮತ್ತು ಇತರರು

**ಮಧ್ಯಂತರ ಅರ್ಜಿ.12 ರ ಪಕ್ಷಕಾರರು**

ಅರ್ಜಿದಾರು/ವಾದಿ : ಮಹದೇವನಾಯಕ
-- (ವಾದಿಯ ಮುಕ್ತಿಯಾರುದಾರರು )

-ವಿರುದ್ದ-

ಪ್ರತ್ಯರ್ಜಿದಾರರು/ಪ್ರತಿವಾದಿಗಳು : ಜವರನಾಯಕ ಮತ್ತು ಇತರರು
-- (ಪ್ರತಿವಾದಿಗಳು )

**ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 12 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರ ಮೇಲೆ ಆದೇಶ**

ಅರ್ಜಿದಾರರು/ವಾದಿಯ ಮುಕ್ತಿಯಾರುದಾರರು ದಾವೆಯಲ್ಲಿ ಮೃತ ಮಹದೇವಮ್ಮನವರ ವಾರಸುದಾರರನ್ನು ಹೆಚ್ಚುವರಿ ಪ್ರತಿವಾದಿಗಳನ್ನಾಗಿ ದಾವೆಯಲ್ಲಿ ಪಾರ್ಟಿದಾರನ್ನಾಗಿ ಸೇರಿಸಿಕೊಳ್ಳಬೇಕೆಂದು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

2. ಅರ್ಜಿದಾರರು/ವಾದಿ ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ನಿರ್ದಿಷ್ಟ ಕರಾರು ಅನುಷ್ಠಾನಕ್ಕಾಗಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯು ಈಗ ವಿಚಾರಣಾ ಹಂತದಲ್ಲಿರುತ್ತದೆ. ದಾವಾ ಷೆಡ್ಯೂಲ್ ಆಸ್ತಿಯು ಪಿತ್ರಾರ್ಜಿತವಾದ ಆಸ್ತಿಯಾಗಿದ್ದು, 1 ನೇ ಪ್ರತಿವಾದಿಯ ಸಹೋದರಿ ಮಹದೇವಮ್ಮ ಎಂಬುವವರು ಕರಾರುಪತ್ರ ನೊಂದಣಿಯಾಗುವ ಸಂದರ್ಭದಲ್ಲಿ ಹಾಜರಿರಲಿಲ್ಲ ಹಾಗೂ ದಿನಾಂಕ:26.11.2014 ರಿಂದ ಕಾಣೆಯಾಗಿದ್ದು, ಈ ಬಗ್ಗೆ ಮಹದೇವಮ್ಮನ ವಾರಸುದಾರರು ಗೌರವಾನ್ವಿತ ಸಿವಿಲ್ ನ್ಯಾಯಾಲಯ ಹೆಚ್.ಡಿ.ಕೋಟೆಯಲ್ಲಿ ಮಹದೇವಮ್ಮ ಮೃತಪಟ್ಟ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಪಡೆಯಲು ಆದೇಶ ಪಡೆದಿದ್ದು, ಮಹದೇವಮ್ಮನ ವಾರಸುದಾರರು ಈ ದಾವೆಯಲ್ಲಿ ಅವಶ್ಯಕ ಪಾರ್ಟಿಯಾಗಿರುವುದರಿಂದ ಪ್ರತಿವಾದಿಗಳನ್ನಾಗಿ ಸೇರಿಸಬೇಕಾಗಿರುತ್ತದೆ ಹಾಗಾಗಿ ಘನನ್ಯಾಯಾಲಯವು ಅರ್ಜಿಯನ್ನು ಪುರಸ್ಕರಿಸದಿದ್ದರೆ ನನಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಸದರಿ ಅರ್ಜಿಯನ್ನು ಪರಸ್ಕರಿಸಿದರೆ ಪ್ರತಿವಾದಿಗಳಿಗೇ ಯಾವುದೇ ನಷ್ಟ ಉಂಟಾಗುವುದಿಲ್ಲ ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

3. ಪ್ರತಿವಾದಿಗಳು ತಕರಾರು/ಆಕ್ಷೇಪಣೆ ಸಲ್ಲಿಸಿಲ್ಲ .

4. ವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ಕರಾರು ನಿರ್ದಿಷ್ಟ ಅನುಷ್ಠಾನಕ್ಕಾಗಿ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯು ಪ್ರತಿವಾದಿಗಳ

ಸಾಕ್ಷಿ ವಿಚಾರಣೆಗೆಂದು ನಿಗದಿಯಾದ ಸಮಯದಲ್ಲಿ ವಾದಿಯು ಪ್ರಸ್ತುತ ಮಧ್ಯಾಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

6. ಮುಂದುವರೆದಿದು, ವಾದಿಯು ಪ್ರಸ್ತುತ ಅರ್ಜಿಯಲ್ಲಿ ಮೃತ ಮಹದೇವಮ್ಮನವರ ವಾರಸುದಾರರನ್ನು ಹೆಚ್ಚುವರಿ ಪ್ರತಿವಾದಿಗಳನ್ನಾಗಿ ದಾವೆಯಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡಿರುತ್ತಾರೆ. ಆದರೆ ಈ ಹಿಂದೆ ವಾದಿಯು ಮಹದೇವಮ್ಮನವರ ವಾರಸುದಾರರನ್ನು ಪಾರ್ಟಿದಾರರನ್ನಾಗಿ ದಾವೆಯಲ್ಲಿ ಸೇರಿಸಲು ಮದ್ಯಾಂತರ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ದಿನಾಂಕ 11.01.2023 ರಂದು ತಿರಸ್ಕೃತಕೊಂಡಿರುತ್ತದೆ. ಈ ಎಲ್ಲಾ ಸಂಗತಿಗಳು ವಾದಿಗೆ ತಿಳಿದಿದ್ದರು ಸಹ ಉದ್ದೇಶಪೂರ್ವಕವಾಗಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಈ ಹಿಂದೆ ವಾದಿರವರು ನ್ಯಾಯಾಲಯದಲ್ಲಿ ಸದರಿ ಮಹದೇವಮ್ಮನವರ ವಾರಸುದಾರರನ್ನು ಪಕ್ಷಗಾರನ್ನಾಗಿ ಮಾಡಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿದು ಇದೇ ನ್ಯಾಯಾಲಯವು ಆ ಅರ್ಜಿಯನ್ನು ತಿರಸ್ಕರಿಸಿರುತ್ತದೆ. ಸದರಿ ಆದೇಶವನ್ನು ವಾದಿರವರು ಎಲ್ಲಿಯು ಪ್ರಶ್ನೆಸಿರುವುದಿಲ್ಲ, ಈಗ ದಾವೆಯು ಪ್ರತಿವಾದಿರವರ ಸಾಕ್ಷಿಗೆಂದು ನಿಗದಿಪಡಿಸಿರುವ ಸಮಯದಲ್ಲಿ ಪ್ರಸ್ತುತ ಅರ್ಜಿಯನ್ನು ತಂದಿರುತ್ತಾರೆ. ಈ ಹಿಂದೆಯೇ ಇದೇ ನ್ಯಾಯಾಲಯ ವಾದಿಯವರು ತಂದಿದ ಅರ್ಜಿಯನ್ನು ತಿರಸ್ಕರಿಸುವುದರಿಂದ ಇನ್ನೊಮ್ಮೆ ಇದೇ ನ್ಯಾಯಾಲಯವು ಪ್ರಸ್ತುತ ಅರ್ಜಿಯಲ್ಲಿ ಕೇಳಿರುವ ಪಾರ್ಥನೆಯನ್ನು ಆದೇಶಿಸಿಲು ಬರುವುದಿಲ್ಲ. ಆದುದರಿಂದ ಈ ಕೆಳಕಂಡಂತೆಃ

**ಆದೇಶ**

**ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ. XII ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರಡಿಯಲ್ಲಿ ಹೆಚ್ಚುವರಿ ಪ್ರತಿವಾದಿಗಳಾಗಿ ಸೇರ್ಪಡೆಯಾಗುವರ ಅರ್ಜಿಯನ್ನು ವಜಾಗೊಳಿಸಲಾಗಿದೆ.**

(ಮೇಲಿನ ಆದೇಶವನ್ನು ಶೀಘ್ರಲಿಪಿಗಾರಿನಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಂತರ ಓದಿ ತಿದ್ದುಪಡಿ ಮಾಡಿ ಸಹಿ ಮಾಡಿ ಇಂದು **ದಿನಾಂಕಃ 18ನೇ ನವೆಂಬರ್ 2025 ರಂದು** ತೆರೆದ ನ್ಯಾಯಾಲಯದಲ್ಲಿ ಪ್ರಸಿದ್ದಿಪಡಿಸಲಾಯಿತು).

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಹೆಚ್.ಡಿ.ಕೋಟೆ